## ವಿದೇಶದಲ್ಲಿ ಅಕ್ರಮ ಆಸ್ತಿ, ಹೂಡಿಕೆ ಆರೋಪ ಕುರಿತು ವಿಚಾರಣೆ

# ಜಾರ್ಜ್‌ಗೆ ನಾಲ್ಕು ತಾಸು ಇ.ಡಿ ಡ್ರಿಲ್

▫ ವಿಕ ಸುದ್ದಿಲೋಕ ಬೆಂಗಳೂರು

ವಿದೇಶದಲ್ಲಿ ಅಕ್ರಮ ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಮಾಜಿ ಗೃಹ ಸಚಿವ, ಸರ್ವಜ್ಞನಗರ ಶಾಸಕ ಕೆ.ಜೆ ಜಾರ್ಜ್, ಗುರುವಾರ ನಗರದ ಶಾಂತಿನಗರದಲ್ಲಿರುವ ಜಾರಿ ನಿರ್ದೇಶನಾಲಯದ ಕಚೇರಿಗೆ ತೆರಳಿ ವಿಚಾರಣೆ ಎದುರಿಸಿದರು.



ಸುಮಾರು ನಾಲ್ಕು ತಾಸುಗಳ ಕಾಲ ವಿಚಾರಣೆ ಎದುರಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಾರ್ಜ್, "ಸಮನ್ಸ್ ನೀಡಿದ್ದ ಕಾರಣ ವಿಚಾರಣೆಗೆ ಬಂದಿದ್ದೇನೆ. ಮತ್ತೆ ಏನಾದರೂ ಮಾಹಿತಿ ಕೇಳಲು ಕರೆದರೆ ಬಂದು ಕೊಡುತ್ತೇನೆ. ಜವಾಬ್ದಾರಿಯುತ ನಾಗರಿಕನಾಗಿ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇನೆ," ಎಂದರು.

ಕುಟುಂಬ ಸದಸ್ಯರ ಹೆಸರಿನಲ್ಲಿ ವಿದೇಶಗಳಲ್ಲಿ ಹೂಡಿಕೆ ಮಾಡಿರುವ ಆರೋಪದ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, "ಜಾರಿ ನಿರ್ದೇಶನಾಲಯದವರು ಏನು ಕೇಳುತ್ತಾರೋ ಅದಕ್ಕೆ ಉತ್ತರ ನೀಡುತ್ತೇನೆ. ಅದನ್ನು ಬಹಿರಂಗವಾಗಿ ಚರ್ಚಿಸಲು ಸಾಧ್ಯವಾಗುವುದಿಲ್ಲ," ಎಂದರು.

**ಟಿವಿಗಳಲ್ಲಿ ಮಾನ ಹರಾಜು ಸಲ್ಲ**

ನಿಮ್ಮ ವಿರುದ್ಧ ಆರೋಪ ಮಾಡಿರುವವರ ವಿರುದ್ಧ ಮಾನಹಾನಿ ಕೇಸ್ ದಾಖಲಿಸಿರುವ ಕುರಿತು ಕೇಳಿದ ಪ್ರಶ್ನೆಗೆ, "ಆರೋಪ ಮಾಡಿದ ಕೂಡಲೇ ನಾನು ತಪ್ಪಿತಸ್ಥನಾಗುವುದಿಲ್ಲ. ಯಾರಾದರೂ ಯಾವುದೇ ಆಪಾದನೆ ಮಾಡಬಹುದು. ಇ.ಡಿ, ಐ.ಟಿ, ಲೋಕಾಯುಕ್ತಕ್ಕೆ ದೂರು ನೀಡಬಹುದು. ಆದರೆ, ಆ ಕುರಿತು ಮಾಧ್ಯಮಗಳ ಎದುರು ಹೋಗಿ ನಾನು ಆಪಾದಿತ ಎಂದು ಬಿಂಬಿಸುವುದರ ವಿಚಾರವಾಗಿ ಮಾನಹಾನಿ ಕೇಸ್ ಹಾಕಿದ್ದೇನೆ. ಮಾಧ್ಯಮಗಳ ಎದುರು ನಾನು ತಪ್ಪಿತಸ್ಥ ಎಂದು ಹೇಳಿ ನನ್ನ ಹೆಸರಿಗೆ ಮಸಿ ಬಳಿಯುವುದಕ್ಕೆ ಆಕ್ಷೇಪವಿದೆ," ಎಂದರು.

ಈ ನಡುವೆ, ಜಾರ್ಜ್ ಅವರಿಂದ ದಾಖಲೆಗಳನ್ನು ಸಂಗ್ರಹಿಸಿ ಪ್ರಾಥಮಿಕ ಹಂತದ ಮಾಹಿತಿ ಕಲೆ ಹಾಕಿರುವ ಇ.ಡಿ. ಅಧಿಕಾರಿಗಳು, ತಮ್ಮ ಬಳಿ ಇರುವ ದಾಖಲೆಗಳು ಮತ್ತು ಜಾರ್ಜ್ ಅವರು ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ವಿಚಾರಣೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ. ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆ ಹಾಗೂ ಆದಾಯ ತೆರಿಗೆ ಕಾಯಿದೆಗೆ ಸಂಬಂಧಿಸಿದಂತೆ ಜಾರ್ಜ್ ವಿರುದ್ಧ ಜಾರಿ ನಿರ್ದೇಶನಾಲಯ ವಿಚಾರಣೆ ನಡೆಸುತ್ತಿದೆ.

**ಆಸ್ತಿ ಘೋಷಣೆ ಮಾಡಿಕೊಳ್ಳದ ಜಾರ್ಜ್:** ಜಾರ್ಜ್ ಅವರು ತಮ್ಮ ಪತ್ನಿ, ಮಗ, ಮಗಳು ಹಾಗೂ ಅಳಿಯನ ಹೆಸರಿನಲ್ಲಿ ಅಮೆರಿಕದ ನ್ಯೂಯಾರ್ಕ್ ಮತ್ತು ಆಸ್ಟ್ರೇಲಿಯಾದಲ್ಲಿ ಹೊಂದಿರುವ ಕೋಟ್ಯಂತರ ರೂ. ಮೌಲ್ಯದ ಆಸ್ತಿ ವಿವರಗಳನ್ನು 2018ರ ಚುನಾವಣೆ ಅಫಿಡವಿಟ್‌ನಲ್ಲಿ ಘೋಷಿಸಿಕೊಂಡಿಲ್ಲ. 2014 ಮತ್ತು 2015ರಲ್ಲಿ ಲೋಕಾಯುಕ್ತಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕೇವಲ 2 ಆಸ್ತಿ ವಿವರಗಳನ್ನು ಮಾತ್ರ ತೋರಿಸಿದ್ದಾರೆ.